

ನಂಟು. ಸಾಗವಾನಿ ಗಿಡಗಳನ್ನು ಬೆಳೆಸುವ ಕೆಲಸದಲ್ಲಿ ವ್ಯಾಪಕವಾಗಿ ಅವರನ್ನು ಬಳಸಿಕೊಳ್ಳಲಾಗಿದೆ. ಆದರೆ, ವೈಲ್ಡ್‌ಲೈಫ್ ಆಕ್ಟ್ ಬಂದಮೇಲೆ ಯಾವ ಭೂ ದಾಖಲೆಗಳೂ ಇಲ್ಲದ ಈ ಕಾಡಿನ ಮಕ್ಕಳು ನೆಲೆ ಕಳೆದುಕೊಂಡಿದ್ದಾರೆ. ಕಾಫಿ ಪ್ಲಾಂಟರ್‌ಗಳು ಕಾಡನ್ನು ಅತಿಕ್ರಮಿಸಿದ ಮೇಲೆ ಅತಂತ್ರರಾಗಿ, ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

ಆನೆಗಳ ಕತೆಯೂ ಮಾವುತರ ಕತೆಗಿಂತ ಭಿನ್ನವಲ್ಲ. ಸಾವಿರಾರು ಎಕರೆಗಳ ಕಾರ್ಪೊರೇಟ್ ಕಾಫಿ ಪ್ಲಾಂಟೇಶನ್‌ಗಳು, ಟ್ರೇಡಿಂಗ್ ಕಂಪನಿಗಳು ಬಂದಮೇಲೆ ಆನೆಗಳು ಸಂಚರಿಸುವ ಸಹಜಪಥ ಕಾಣೆಯಾಗಿದೆ. ಆದ್ದರಿಂದಲೇ ಈ ಭಾಗದಲ್ಲಿ ಆನೆ–ಮನುಷ್ಯರ ಸಂಘರ್ಷ ಜಾಸ್ತಿ. ಅವುಗಳ ವಾಸಸ್ಥಾನ, ಆಹಾರಮೂಲಗಳನ್ನು ಕಬಳಿಸಿದ ಮನುಷ್ಯನ ಮೇಲೆ ಸಹಜವಾಗಿಯೇ ಅವು ಆಕ್ರಮಣ ಮಾಡುತ್ತಿವೆ. ಮನುಷ್ಯರ ಸಾವು ಸಂಭವಿಸುತ್ತಿದ್ದಂತೆಯೇ ಅಂಥ ಆನೆಗಳನ್ನು ಹಿಡಿಯುವಂತೆ ಸರ್ಕಾರದ ಮೇಲೆ ಒತ್ತಡ ಹೆಚ್ಚುತ್ತದೆ. ಅಂಥ ಆನೆಗಳನ್ನೇ ಶಿಬಿರಗಳಲ್ಲಿ ಪಳಗಿಸಲಾಗುತ್ತದೆ. ಹಿಂದೆ ಬ್ರಿಟೀಷರು ಆನೆಗಳನ್ನು ಬೃಹತ್ ದಿಮ್ಮಿಗಳನ್ನು ಸಾಗಿಸುವ ಜೀತಕ್ಕೆ ಬಳಸಿಕೊಳ್ಳತೊಡಗಿದಾಗಲೇ ಆನೆಗಳ ಹಾಗೂ ಮಾವುತರ ಸಾಂಸ್ಕೃತಿಕ ಸ್ಥಾನಮಾನಗಳೂ ಕುಸಿದವು. ಈಗ ಬೃಹತ್‌ಯಂತ್ರಗಳ ಯುಗದಲ್ಲಿ ಆನೆಗಳು ದುಡಿಮೆಗೂ ಬೇಡ. ಅವುಗಳನ್ನು ಸಾಕುವುದು ಸರ್ಕಾರಕ್ಕೂ ಹೊರೆ.

ಆನೆಗಳ ಸಹಜ ಜೀವನವನ್ನು ನಾವು ಡಿಸ್ಟರ್ಬ್ ಮಾಡಿಯಾಗಿದೆ! ಆದ್ದರಿಂದಲೇ ಗಾತ್ರದಲ್ಲಿ ಕುಗ್ಗಿದ ಆನೆಗಳೂ ಮಾವುತರೂ ದುಬಾರೆಯಲ್ಲಿ ವಾಸ್ತವದ ವ್ಯಂಗ್ಯಕ್ಕೆ ಸಾಕ್ಷಿಯಾಗಿದ್ದಾರೆ. ಕುಂಡೆಯ ಕೆಳಗೆ ಜಾರುವ ಚಡ್ಡಿಯ ಪರಿವೆಯಿಲ್ಲವೇ ಆನೆಗಳಿಗೆ ಬೆಲ್ಲ ಕೊಡುತ್ತಾ ತಾನೂ ಮುರಿದು ಬಾಯಿಗಿಟ್ಟುಕೊಳ್ಳುತ್ತಿದ್ದ ಜೇನುಕುರುಬ ಬಾಲಕ ಹಾಗೂ ಅವನಪ್ಪನನ್ನು ಬೀಳ್ಕೊಂಡು, ಆನೆಗಳಿಗೊಂದು ಭಾರದ ವಿದಾಯ ಹೇಳಿ ಅಲ್ಲಿಂದ ಹೊರಟೆವು.

## ಇಂತಿಪ್ಪುದು ಇರ್ಪು!

ಮರುದಿನ ಕರೆದದ್ದು ಬ್ರಹ್ಮಗಿರಿ ಪರ್ವತಗಳ ತಪ್ಪಲಲ್ಲಿ ಇರುವ ಇರ್ಪು ಜಲಪಾತ. ಕರ್ನಾಟಕದ ಕೊಡಗು ಹಾಗೂ ಕೇರಳದ ವಯನಾಡಿಯ ನಡುವೆ ಎರಡು ರಾಜ್ಯಗಳನ್ನು ಬೇರ್ಪಡಿಸುವಂತೆ ಈ ಪರ್ವತ ಶ್ರೇಣಿಯಿದೆ. ಅಪರೂಪದ ಜೀವಸಂಕುಲವನ್ನು ಹೊಂದಿದ ಅರಣ್ಯ ಹಾಗೂ ಗುಹೆಗಳನ್ನು ಇದು ಒಳಗೊಂಡಿದೆ. ಕುಶಾಲನಗರದಿಂದ ಕೊಟ್ಟ ಎಂಬ ಊರನ್ನು ಹಾಯ್ದು ಶ್ರೀಮಂಗಲ ತಾಲ್ಲೂಕಿನಲ್ಲಿರುವ ಇರ್ಪು ಜಲಪಾತಕ್ಕೆ ಬರಬೇಕು.

ನೀರಕೆಳಗೆ ನಿಂತರೆ ಜೀವಮೂಲಕ್ಕೂ ತಂಪುಹುಟ್ಟಿಸಿ ಝುಲ್ಲೆನಿಸುವ ದುಬಾರೆ ಜಲಪಾತವಿದು.

ಈ ಜಲಪಾತದ ದರ್ಶನ ಮಾಡಿಸಿದವರು ಕೋಲಾರದ ಅಲೆಮಾರಿ ಸ್ನೇಹಿತ ಮುರಳಿ ಅಲಿಯಾಸ್ ಸ್ವಾಮಿ ಪ್ರೇಮ ನಿರ್ಮಲ್. ತಮ್ಮ ಅಲೆಮಾರಿ ಪಯಣದಲ್ಲಿ ಇವರು ಈಗ ಬ್ರಹ್ಮಗಿರಿ ತಪ್ಪಲಲ್ಲಿರುವ ಟಿ. ಶೆಟ್ಟಿಗೇರಿಯಲ್ಲಿ ಕಾಫಿತೋಟ ಕೊಂಡು ಸದ್ಯ ಅಲ್ಲಿ ನೆಲೆನಿಂತಿದ್ದಾರೆ.

ಕುಶಾಲನಗರದಿಂದ ಅಲ್ಲಿಯವರೆಗಿನ ಪಯಣವೇ ಒಂದು ಪರಿಮಳದ ಹಾದಿ. ಕಾಫಿ ಹೂವುಗಳ ಘಮ ಆಸ್ವಾದಿಸುತ್ತ ಜಿಗ್‌ಜಾಗ್ ರಸ್ತೆಗಳಲ್ಲಿ ಕಾರು ಹೊರಳುತ್ತಿದ್ದರೆ ಅದೊಂದು ಥ್ರಿಲ್. ಬೆಟ್ಟಗಳ ದಟ್ಟ ಹಸಿರು ಕಾಫಿ ಪೊದೆಗಳ ತುಂಬಾ ಅಚ್ಚಬಿಳಿಯ ಹೂಗಳು. ಏಕಾಏಕಿ ಕವಿದ ಶೀತಲ ಅನುಭೂತಿ. ಮುರಳಿಯ ತೋಟದಲ್ಲೇನೋ ಕೆಲಸ ನಡೆಯುತ್ತಿತ್ತು. ಸುತ್ತ ಬ್ರಹ್ಮಗಿರಿ ಬೆಟ್ಟಗಳ ಅಚ್ಛಾದ ನಿರ್ಮಲ ಆಕಾಶದೊಂದಿಗೆ ಸ್ಪರ್ಧಿಸುತ್ತಿತ್ತು. ಅಲ್ಲಿ ಅವನಿತ್ತ ತಣ್ಣನೆ ರಾಗಿಮಾಲ್ಟ್ ಕುಡಿದು ಇರ್ಪು ಕಡೆ ಹೊರಟೆವು. ಬ್ರಹ್ಮಗಿರಿ ಅಭಯಾರಣ್ಯದೊಳಗೆ ಪ್ರವೇಶಿಸಿದೆವು. ನಡೆಯುತ್ತ ನಡೆಯುತ್ತ ಹೋದಂತೆ ನಡೆದ ಆಯಾಸವನ್ನೆಲ್ಲ ತಣಿಸುವಂತೆ ಇರ್ಪು ಧುಮ್ಮಿಕ್ಕುತ್ತಿತ್ತು.

ಯಾವುದೇ ಅಡೆತಡೆಯಿಲ್ಲದೇ ಜಲಪಾತದ ಧುಮುಕುವಿಕೆಗೆ ಮೈಯೊಡ್ಡಬಲ್ಲ ಅವಕಾಶವಿರುವ ಅಪರೂಪದ ಜಲಪಾತವಿದು. ನೀರಕೆಳಗೆ ನಿಂತರೆ ಜೀವಮೂಲಕ್ಕೂ ತಂಪುಹುಟ್ಟಿಸಿ ಝುಲ್ಲೆನಿಸುವ ತಣ್ಣಗಿನ ಅನುಭವ! ನೀರು ಧುಮುಕುವ ಆಲಾಪ ಕೇಳುತ್ತ ನೀರಿಗೆ ಮೈಯೊಡ್ಡಿ ಕುಳಿತರೆ, ಜಗದ ಸದ್ದುಗಳೆಲ್ಲ ಕರಗಿ ನೀರಿನ ಆಲಾಪವೊಂದೇ ನಿಜವಾಗಿ ಮನಸ್ಸು ಅಲ್ಲಿ ಲಯವಾಗಿ ಧ್ಯಾನದಂತಹುದೇನೋ ಸಂಭವಿಸಿತು. ಆಹಾ! ಇಂಥ ಕ್ಷಣಗಳನ್ನು ನೀಡಿದ ಇರ್ಪುವಿಗೆ ಅಭಾರಿ!

ನೀರಾಟದ ಮಜ ಪಡೆಯುತ್ತಿದ್ದ ಮಕ್ಕಳು ಹಾಗೂ ನಾವೆಲ್ಲ ಒಲ್ಲದ ಮನಸ್ಸಿನಿಂದ ಅಲ್ಲಿಂದ ಎದ್ದು ಬಂದೆವು. ಮತ್ತೆ ನಾಗರಹೊಳೆ ಅರಣ್ಯದ ಮೂಲಕ ಮೈಸೂರು ತಲುಪಿದೆವು. ಯಾವ ಕ್ಷಣಕ್ಕೂ ಆನೆಯೋ ಚಿರತೆಯೋ ಎದುರಾಗಬಹುದೆಂಬ ತವಕದಲ್ಲಿ ದಾರಿ ಸಾಗಿದ್ದೇ ತಿಳಿಯಲಿಲ್ಲ. ದಾರಿ ತುಂಬ ಜಿಂಕೆಗಳ ಸಂಸಾರ ಎದುರಾಗುತ್ತಿತ್ತು. ತಮ್ಮದೇ ಸ್ವಚ್ಛಂದ ವಿಹಾರದಲ್ಲಿ ಬೆರಗಿನಲ್ಲಿ ಜಿಗಿದು ಸಾಗುತ್ತಿದ್ದ ಜಿಂಕೆಗಳ ಹಿಂದೆ ಮನಸ್ಸು ಓಡುತ್ತಿತ್ತು. ಮತ್ತೆ ಅದೇ ಇಳಿಸಂಜೆ ಗಡಿಯಾರ ನೋಡಿಕೊಳ್ಳುವ ನೆನಪು ಬಂದದ್ದು ಮೈಸೂರು ಸಮೀಪವಾದಾಗಲೇ. ಕಾಲದೊಳಗಿದ್ದು ಕಾಲದ ಹಂಗು ಕಳಚಿದ ಪಯಣಕ್ಕೆ ಋಣಿಯೆಂದುಕೊಂಡೆವು ನಾನು, ವಸಂತ, ಮಕ್ಕಳಾದ ಯಶಸ್ವಿನಿ ಮತ್ತು ತೇಜಸ್ವಿ.